# UNIVERSITY GRANTS COMMISSION
## NET BUREAU

**Code No. : 21**

**Subject : KANNADA**

SYLLABUS AND SAMPLE QUESTIONS

**Note :**

There will be two question papers, Paper–II and Paper–III (Part–A & B). Paper–II will cover 50 Objective Type Questions (Multiple choice, Matching type, True/False, Assertion-Reasoning type) carrying 100 marks. Paper–III will have two Parts—A and B; Paper–III(A) will have 10 short essay-type questions (300 words) carrying 16 marks each. In it there will be one question with internal choice from each unit (i.e., 10 questions from 10 units; Total marks will be 160). Paper–III(B) will be compulsory and there will be one question from each of the Electives. The candidate will attempt only one question (one elective only in 800 words); carrying 40 marks. Total marks of Paper–III will be 200.

I. ಪಠ್ಯಕ್ರಮ

ಈ ಪಠ್ಯಕ್ರಮದಲ್ಲಿ ಎರಡು ಪತ್ರಿಕೆಗಳಿರುತ್ತವೆ.

**ಪತ್ರಿಕೆ II** : ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಸಾಮಾನ್ಯವಾಗಿ ಬೋಧಿಸುವ ಕನ್ನಡ ಅಧ್ಯಯನದ ವಿಷಯಗಳನ್ನು ಈ ಪತ್ರಿಕೆ ಒಳಗೊಂಡಿರುತ್ತದೆ.

**ಪತ್ರಿಕೆ III** : ಈ ಪತ್ರಿಕೆಯಲ್ಲಿ ಎರಡು ಭಾಗಗಳಿರುತ್ತವೆ. A ಮತ್ತು B.

'A' ಭಾಗ : ಇದರಲ್ಲಿ 10 ಘಟಕ (Units)ಗಳಿರುತ್ತವೆ. ಅವು ಹೀಗಿವೆ :

i) ಪ್ರಾಚೀನ ಕವಿಗಳು - ಕೃತಿಗಳು

ii) ನಡುಗನ್ನಡ ಕವಿಗಳು - ಕೃತಿಗಳು

iii) ಹೊಸಗನ್ನಡ ಕವಿಗಳು - ಕೃತಿಗಳು

iv) ಆಧುನಿಕ ಕಾದಂಬರಿ - ಕಥೆ

v) ಹೊಸಗನ್ನಡ ನಾಟಕ

vi) ಕನ್ನಡ ಸಂಶೋಧನೆ - ವಿಮರ್ಶೆ

vii) ತೌಲನಿಕ ಕಾವ್ಯ ಮೀಮಾಂಸೆ

viii) ಸಾಹಿತ್ಯ ವಿಮರ್ಶೆಯ ತತ್ವಗಳು

ix) ಕನ್ನಡ ಭಾಷೆಯ ಚರಿತ್ರೆ

x) ಕನ್ನಡ ಛಂದಸ್ಸು

B ಭಾಗ : ಇದರಲ್ಲಿ *ಐದು* ಐಚ್ಛಿಕ ವಿಷಯಗಳಿರುತ್ತವೆ. ಅಭ್ಯರ್ಥಿಯು ಯಾವುದಾದರೂ *ಒಂದು* ಐಚ್ಛಿಕವನ್ನು ಆಯ್ಕೆ ಮಾಡಿಕೊಳ್ಳಬಹುದು.

ಐಚ್ಛಿಕಗಳು : i) ಜಾನಪದ ಅಧ್ಯಯನ

ii) ತೌಲನಿಕ ಸಾಹಿತ್ಯ ಅಧ್ಯಯನ

iii) ಕನ್ನಡ ಛಂದಸ್ಸು

iv) ಶಾಸನ ಶಾಸ್ತ್ರ ಮತ್ತು ಕನ್ನಡ ಶಾಸನ ಸಾಹಿತ್ಯ

v) ತೌಲನಿಕ ದ್ರಾವಿಡ ಭಾಷಾ ವಿಜ್ಞಾನ

## II. ಪ್ರಶ್ನೆ ಪತ್ರಿಕೆಗಳ ಸ್ವರೂಪ

**ಪತ್ರಿಕೆ II**

1. ಈ ಪತ್ರಿಕೆಯ ಅವಧಿ 1 ಗಂಟೆ
2. ಒಟ್ಟು ಅಂಕಗಳು 100
3. ಎಲ್ಲ ಪ್ರಶ್ನೆಗಳು ಕಡ್ಡಾಯ. ಒಟ್ಟು 50 ಪ್ರಶ್ನೆಗಳಿರುತ್ತವೆ.
4. ಪ್ರತಿಯೊಂದು ಪ್ರಶ್ನೆಯ ಉತ್ತರಕ್ಕೂ 4 ಆಯ್ಕೆಗಳಿದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾದ ಉತ್ತರವಾಗಿರುತ್ತದೆ.
5. ಪ್ರತೀ ಪ್ರಶ್ನೆಗೆ 2 ಅಂಕಗಳು.
6. ಈ ಪತ್ರಿಕೆಯು ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿರುತ್ತದೆ.

i) ಕನ್ನಡ ಸಾಹಿತ್ಯ ಚರಿತ್ರೆ - ಪ್ರಾಚೀನ - 20 ಅಂಕಗಳು

ii) ಕನ್ನಡ ಸಾಹಿತ್ಯ ಚರಿತ್ರೆ - ಆಧುನಿಕ - 20 ಅಂಕಗಳು

iii) ತೌಲನಿಕ ಕಾವ್ಯ ಮೀಮಾಂಸೆ - 20 ಅಂಕಗಳು

iv) ಸಾಹಿತ್ಯ ವಿಮರ್ಶೆ - 20 ಅಂಕಗಳು

v) ಕನ್ನಡ ಭಾಷೆಯ ಚರಿತ್ರೆ - 20 ಅಂಕಗಳು

vi) ಈ ಪತ್ರಿಕೆಯಲ್ಲಿ ಈ ಕೆಳಗಿನ 6 ಮಾದರಿಗಳ ಪ್ರಶ್ನೆಗಳಿರುತ್ತವೆ :

I. ಬಹು ಪ್ರಶ್ನೆಗಳು : ಏಕ ಆಯ್ಕೆಯ ಮಾದರಿ

II. ಬಹು ಪ್ರಶ್ನೆಗಳು : ಬಹು ಆಯ್ಕೆಯ ಮಾದರಿ

III. ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ

IV. ಹೇಳಿಕೆ - ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ

V. ಬಹು ಆಯ್ಕೆಯ ಜೋಡಣೆಯ ಮಾದರಿ

VI. ಅನುಕ್ರಮದ ಮಾದರಿ

ಈ ಮಾದರಿಗಳ ವಿವರಗಳಿಗೆ ಪಾಠ ಪಟ್ಟಿಯ ಕೊನೆಯಲ್ಲಿರುವ ಮಾದರಿ ಪ್ರಶ್ನೆ ಪತ್ರಿಕೆಯನ್ನು ಅವಶ್ಯವಾಗಿ ಗಮನಿಸಿರಿ.

**ಪತ್ರಿಕೆ III**

1. ಈ ಪತ್ರಿಕೆಯ ಅವಧಿ 2½ ಗಂಟೆಗಳು
2. ಒಟ್ಟು ಅಂಕಗಳು 200
3. ಈ ಪತ್ರಿಕೆಯಲ್ಲಿ A ಮತ್ತು B ಎಂಬ ಎರಡು ಭಾಗಗಳು ಇರುತ್ತವೆ.
4. A ಭಾಗಕ್ಕೆ 160 ಅಂಕಗಳು ಮತ್ತು B ಭಾಗಕ್ಕೆ 40 ಅಂಕಗಳು.

**A ಭಾಗ**

1. ಇದರಲ್ಲಿ 10 ಘಟಕಗಳಿರುತ್ತವೆ. ಪ್ರತಿಯೊಂದು ಘಟಕದಿಂದ ಒಂದು ಪ್ರಶ್ನೆ ಇರುತ್ತದೆ. ಪ್ರತಿಯೊಂದು ಪ್ರಶ್ನೆಯಲ್ಲಿ ಆಂತರಿಕ ಆಯ್ಕೆಗೆ ಅವಕಾಶವಿರುತ್ತದೆ. ಎಲ್ಲ ಪ್ರಶ್ನೆಗಳೂ ಕಡ್ಡಾಯ.
2. ಪ್ರತೀ ಪ್ರಶ್ನೆಗೆ 16 ಅಂಕಗಳು.
3. ಪ್ರತಿಯೊಂದು ಪ್ರಶ್ನೆಗೆ ಸುಮಾರು 300 ಶಬ್ದಗಳಲ್ಲಿ ಉತ್ತರಿಸಬೇಕು.

**B ಭಾಗ**

1. ಇದರಲ್ಲಿ ಒಟ್ಟು 5 ಐಚ್ಛಿಕಗಳಿರುತ್ತವೆ.
   - i) ಜಾನಪದ ಅಧ್ಯಯನ
   - ii) ತೌಲನಿಕ ಸಾಹಿತ್ಯ ಅಧ್ಯಯನ
   - iii) ಕನ್ನಡ ಛಂದಸ್ಸು
   - iv) ಶಾಸನ ಶಾಸ್ತ್ರ ಮತ್ತು ಕನ್ನಡ ಶಾಸನ ಸಾಹಿತ್ಯ
   - v) ತೌಲನಿಕ ದ್ರಾವಿಡ ಭಾಷಾ ವಿಜ್ಞಾನ
2. ಇವುಗಳಲ್ಲಿ ಯಾವುದಾದರೂ *ಒಂದು* ಐಚ್ಛಿಕದಿಂದ *ಒಂದು* ಪ್ರಶ್ನೆಗೆ ಉತ್ತರಿಸಬೇಕು.
3. ಈ ಪ್ರಶ್ನೆಯು ಸವಿಸ್ತಾರ ಉತ್ತರವನ್ನು ಬಯಸುವ ಮಾದರಿಯದ್ದು.
4. ಈ ಪ್ರಶ್ನೆಗೆ 40 ಅಂಕಗಳು.
5. ಈ ಪ್ರಶ್ನೆಗೆ ಸುಮಾರು 800 ಶಬ್ದಗಳಲ್ಲಿ ಉತ್ತರಿಸಬೇಕು.

# ಪಠ್ಯಕ್ರಮ (Syllabus)

## ಪತ್ರಿಕೆ II (Paper II)

**ಕನ್ನಡ ಸಾಹಿತ್ಯ ಚರಿತ್ರೆ, ತೌಲನಿಕ ಕಾವ್ಯ ಮೀಮಾಂಸೆ - ಸಾಹಿತ್ಯ ವಿಮರ್ಶೆ ಮತ್ತು ಕನ್ನಡ ಭಾಷಾ ಚರಿತ್ರೆ**

**ಕನ್ನಡ ಸಾಹಿತ್ಯ ಚರಿತ್ರೆ:**

ಅ) ಪ್ರಾಚೀನ ಕನ್ನಡ ಸಾಹಿತ್ಯ :

**ಕನ್ನಡದ ಪ್ರಾಚೀನ ಶಾಸನಗಳು :** ಹಲ್ಮಿಡಿ ಶಾಸನ, ಬಾದಾಮಿ ಶಾಸನ, ತಮ್ಮಟಕಲ್ಲು ಶಾಸನ, ಬುಕ್ಕನ ಶ್ರವಣಬೆಳ್ಗೊಳದ ಶಾಸನ, ಬೊಪ್ಪಣನ ಗೊಮ್ಮಟ ಸ್ತುತಿ, ಜಿನವಲ್ಲಭನ ಗಂಗಾಧರಂ ಶಾಸನ.

**ಕನ್ನಡ ಸಾಹಿತ್ಯ ರೂಪಗಳು :** ಚಂಪೂ, ವಚನ, ಗದ್ಯ, ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ, ಕೀರ್ತನೆ, ಶತಕ.

**ಕನ್ನಡ ಸಾಹಿತ್ಯದ ಪ್ರೇರಣೆಗಳು :**

**ಧರ್ಮಗಳು :** ಜೈನ, ವೀರಶೈವ, ವೈದಿಕ

**ಕನ್ನಡ ಸಾಹಿತ್ಯ ಮತ್ತು ರಾಜಾಶ್ರಯ :** ರಾಷ್ಟ್ರಕೂಟ (ನೃಪತುಂಗ, ಕೃಷ್ಣ III), ಚಾಲುಕ್ಯರು (ಅರಿಕೇಸರಿ, ತೈಲಪ, ಜಯಸಿಂಹ), ಕಳಚೂರಿ (ಬಿಜ್ಜಳ), ಹೊಯ್ಸಳರು (ನರಸಿಂಹ ಬಲ್ಲಾಳ, ವೀರ ಬಲ್ಲಾಳ), ವಿಜಯನಗರ ಅರಸರು (ಪ್ರೌಢದೇವರಾಯ, ಕೃಷ್ಣದೇವರಾಯ), ಮೈಸೂರು ಅರಸರು (ದೇವರಾಜ, ಮುಮ್ಮಡಿ ಕೃಷ್ಣರಾಜ)

**ಅನ್ಯಭಾಷಾ ಸಾಹಿತ್ಯ ಪ್ರೇರಣೆ - ಪ್ರಭಾವ :** ಪ್ರಾಕೃತ, ಸಂಸ್ಕೃತ; ವ್ಯಾಸ, ವಾಲ್ಮೀಕಿ, ಕಾಳಿದಾಸ, ಭಟ್ಟನಾರಾಯಣ, ಬಾಣ, ಜಿನಸೇನ, ಗುಣಭದ್ರ, ವಿಮಲಸೂರಿ, ರವಿಷೇಣ.

**ಪ್ರಮುಖ ಕವಿಗಳು - ಕೃತಿಗಳು :** ಕವಿರಾಜಮಾರ್ಗ, ವಡ್ಡಾರಾಧನೆ, ಪಂಪ, ಪೊನ್ನ, ರನ್ನ, ಚಾವುಂಡರಾಯ, ನಾಗವರ್ಮ I, ದುರ್ಗಸಿಂಹ, ನಾಗವರ್ಮ II, ನಾಗಚಂದ್ರ, ನಯಸೇನ, ಬ್ರಹ್ಮಶಿವ, ಜನ್ನ, ಆಂಡಯ್ಯ, ನೇಮಿಚಂದ್ರ, ರುದ್ರಭಟ್ಟ, ಕೇಶಿರಾಜ, ಷಡಕ್ಷರಿ, ಜೇಡರ ದಾಸಿಮಯ್ಯ, ಬಸವಣ್ಣ, ಅಲ್ಲಮ, ಅಕ್ಕಮಹಾದೇವಿ, ಸಿದ್ಧರಾಮ, ಚೆನ್ನಬಸವಣ್ಣ, ಅಂಬಿಗರ ಚೌಡಯ್ಯ, ಶೂನ್ಯ ಸಂಪಾದನೆಗಳು, ಹರಿಹರ, ರಾಘವಾಂಕ, ಚಾಮರಸ, ಭೀಮಕವಿ, ಕುಮಾರವ್ಯಾಸ, ಕುಮಾರ ವಾಲ್ಮೀಕಿ, ಚಾಟು ವಿಠಲನಾಥ, ನರಹರಿ, ಲಕ್ಷ್ಮೀಶ, ಲಕ್ಕಣ ದಂಡೇಶ, ನಿಜಗುಣ ಶಿವಯೋಗಿ, ದೇಪರಾಜ, ನಂಜುಂಡ, ರತ್ನಾಕರವರ್ಣಿ, ಶ್ರೀಪಾದರಾಯ, ಪುರಂದರದಾಸ, ಕನಕದಾಸ, ವಾದಿರಾಜ, ಜಗನ್ನಾಥದಾಸ, ಮಹೀಪತಿದಾಸ, ವಿಜಯದಾಸ, ಸರ್ವಜ್ಞ, ಸಂಚಿಯ ಹೊನ್ನಮ್ಮ, ತಿರುಮಲಾರ್ಯ, ಮುದ್ರಾಮಂಜೂಷ, ರಾಜಾವಳಿ ಕಥೆ, ಮಿತ್ರವಿಂದಾ ಗೋವಿಂದ, ಮುದ್ದಣ.

**ಆ) ಆಧುನಿಕ ಕನ್ನಡ ಸಾಹಿತ್ಯ**

ಆಧುನಿಕ ಯುಗ : ಸಾಹಿತ್ಯಕ ಪ್ರೇರಣೆಗಳು

ವಿದೇಶಿ ವಿದ್ವಾಂಸರು : ಕಿಟೆಲ್, ಮೋಗ್ಲಿಂಗ್, ಫ್ಲೀಟ್, ಇ.ಪಿ. ರೈಸ್, ಬಿ.ಎಲ್. ರೈಸ್, ರಾಬರ್ಟ್ ಕಾಲ್ಡ್‌ವೆಲ್.

ಪಾಶ್ಚಾತ್ಯ ಪ್ರೇರಣೆ : ಸೊಫೊಕ್ಲಿಸ್, ಶೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಲೀಯೊ ಟಾಲ್‌ಸ್ಟಾಯ್, ಟಿ.ಎಸ್. ಎಲಿಯೆಟ್, ಕಮು, ಕಾಫ್ಕ, ಬ್ರೆಕ್ಟ್.

ಭಾರತೀಯ ಪ್ರೇರಣೆ : ರವೀಂದ್ರನಾಥ ಠಾಗೋರ್, ಬಂಕಿಮಚಂದ್ರ, ಪ್ರೇಮಚಂದ, ತಕಳಿ ಶಿವಶಂಕರ ಪಿಳ್ಳೈ, ಹರಿನಾರಾಯಣ ಆಪ್ಟೆ, ಸುಬ್ರಹ್ಮಣ್ಯ ಭಾರತಿ, ವಿಶ್ವನಾಥ ಸತ್ಯನಾರಾಯಣ.

ಹೊಸಗನ್ನಡ ಸಾಹಿತ್ಯ ಪ್ರಕಾರಗಳು : ಭಾವಗೀತ, ಕಥನಕಾವ್ಯ, ಮಹಾಕಾವ್ಯ, ನಾಟಕ, ಕಾದಂಬರಿ, ಸಣ್ಣಕತೆ, ಲಲಿತಪ್ರಬಂಧ, ಆತ್ಮಕತೆ, ಜೀವನಚರಿತ್ರೆ, ವಿಮರ್ಶೆ, ಸಂಶೋಧನೆ, ಸಂಪಾದನೆ.

ಪ್ರಮುಖ ಕೃತಿಕಾರರು :

ಬಿಎಂಶ್ರೀ, ಗೋವಿಂದ ಪೈ, ಪಂಜೆ ಮಂಗೇಶರಾವ್, ಹಟ್ಟಿಯಂಗಡಿ ನಾರಾಯಣ ರಾವ್, ಕೆರೂರು ವಾಸುದೇವಾಚಾರ್ಯ, ಎಂ.ಎನ್. ಕಾಮತ್, ಗುಲ್ವಾಡಿ ವೆಂಕಟರಾವ್, ಶಾಂತ ಕವಿಗಳು, ಎಂ.ಎಸ್. ಪುಟ್ಟಣ್ಣ, ಬಿ. ವೆಂಕಟಾಚಾರ್ಯ, ಗಳಗನಾಥ, ಮುಳಿಯ ತಿಮ್ಮಪ್ಪಯ್ಯ, ಮ.ಪ್ರ. ಪೂಜಾರ, ಎ.ಆರ್. ಕೃಷ್ಣಶಾಸ್ತ್ರಿ, ಟಿ.ಎಸ್. ವೆಂಕಣ್ಣಯ್ಯ, ಡೆಪ್ಯುಟಿ ಚೆನ್ನಬಸಪ್ಪ, ಉತ್ತಂಗಿ ಚೆನ್ನಪ್ಪ, ಬಸವಪ್ಪ ಶಾಸ್ತ್ರಿ, ಶ್ರೀಕಂಠೇಗೌಡ, ಆರ್. ನರಸಿಂಹಾಚಾರ್, ಎಸ್.ಜಿ. ನರಸಿಂಹಾಚಾರ್.

ಕುವೆಂಪು, ಬೇಂದ್ರೆ, ಮಧುರಚೆನ್ನ, ಗೋಕಾಕ್, ಡಿವಿಜಿ, ಪುತಿನ, ಶಿವರಾಮ ಕಾರಂತ, ರಾವ್ ಬಹಾದ್ದೂರ್, ದೇವುಡು, ಮಾಸ್ತಿ, ಕೆ.ವಿ. ಅಯ್ಯರ್, ಎಸ್.ವಿ. ಪರಮೇಶ್ವರ ಭಟ್ಟ, ಆರ್. ಸಿ. ಹಿರೇಮಠ, ಕಡೆಂಗೋಡ್ಲು ಶಂಕರಭಟ್ಟ, ಮಿರ್ಜಿ ಅಣ್ಣಾರಾಯ, ಡಿ.ಕೆ. ಭೀಮಸೇನ ರಾವ್, ತೀನಂಶ್ರೀ, ಡಿ.ಎಲ್. ನರಸಿಂಹಾಚಾರ್, ಸೇಡಿಯಾಪು ಕೃಷ್ಣ ಭಟ್ಟ, ಎಸ್.ವಿ. ರಂಗಣ್ಣ, ಎಂ.ಆರ್. ಶ್ರೀನಿವಾಸಮೂರ್ತಿ, ಎ.ಎನ್. ಮೂರ್ತಿರಾವ್, ನಾ. ಕಸ್ತೂರಿ, ಬೀಚಿ, ಅನಕೃ, ತರಾಸು, ಬಸವರಾಜ ಕಟ್ಟೀಮನಿ, ಸಿದ್ದಯ್ಯ ಪುರಾಣಿಕ, ಕೆ. ಎಸ್. ನರಸಿಂಹಸ್ವಾಮಿ, ಸಿಂಪಿ ಲಿಂಗಣ್ಣ, ತಿರುಮಲಾಂಬ, ಎಚ್. ವಿ. ಸಾವಿತ್ರಮ್ಮ, ತ್ರಿವೇಣಿ, ಕೃಷ್ಣಮೂರ್ತಿ ಪುರಾಣಿಕ, ರಾಜರತ್ನಂ, ಆನಂದ, ಬೆಟಗೇರಿ ಕೃಷ್ಣಶರ್ಮ, ಅಶ್ವತ್ಥ, ಕೊಡಗಿನ ಗೌರಮ್ಮ, ಕೈಲಾಸಂ, ಶ್ರೀರಂಗ, ಸಂಸ, ಪರ್ವತವಾಣಿ, ರಂ. ಶ್ರೀ. ಮುಗಳಿ, ಎಂ. ಮರಿಯಪ್ಪ ಭಟ್ಟ, ದೇ. ಜವರೇಗೌಡ, ಕ. ವೆಂ. ರಾಘವಾಚಾರ್, ಎಸ್. ಎಸ್. ಮಾಳವಾಡ, ಎಸ್. ಎಸ್. ಭೂಸನೂರಮಠ, ಕೆ.ಜಿ. ಕುಂದಣಗಾರ, ಶಿ. ಶಿ. ಬಸವನಾಳ, ಶಂ.ಬಾ. ಜೋಶಿ, ಪ.ಗು ಹಳಕಟ್ಟಿ, ಎಸ್. ಸಿ. ನಂದೀಮಠ, ಎನ್. ಬಸವಾರಾಧ್ಯ, ಎಚ್. ದೇವೀರಪ್ಪ, ವಿ. ಎಂ. ಇನಾಂದಾರ, ಎಚ್. ತಿಪ್ಪೇರುದ್ರಸ್ವಾಮಿ, ಎಲ್. ಬಸವರಾಜು, ನಿರಂಜನ, ಎಸ್. ಎಲ್. ಭೈರಪ್ಪ, ಚದುರಂಗ, ಪುಟ್ಟಸ್ವಾಮಿ, ವೀ. ಸೀತಾರಾಮಯ್ಯ, ಬಿ. ಎಸ್. ಗದ್ದಗೀಮಠ.

ಹಾ. ಮಾ. ನಾಯಕ, ಜಿ. ಎಸ್. ಶಿವರುದ್ರಪ್ಪ, ಎಂ. ಗೋಪಾಲಕೃಷ್ಣ ಅಡಿಗ, ಗಿರೀಶ್ ಕಾರ್ನಾಡ್, ಚೆನ್ನವೀರ ಕಣವಿ, ದಿನಕರ ದೇಸಾಯಿ, ಎಲ್. ಆರ್. ಹೆಗಡೆ, ಚದುರಂಗ, ಬಿ. ಬಿ. ಹೆಂಡಿ, ಎಂ.ಎಸ್. ಸುಂಕಾಪುರ, ಎಂ. ಎಸ್. ಲಠ್ಠೆ, ಶಾಂತರಸ, ಜೀಶಂ. ಪರಮಶಿವಯ್ಯ, ಶಾಂತಿನಾಥ ದೇಸಾಯಿ, ಎ. ಕೆ. ರಾಮಾನುಜನ್, ಯು. ಆರ್. ಅನಂತಮೂರ್ತಿ, ಪಿ. ಲಂಕೇಶ್, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಯಶವಂತ ಚಿತ್ತಾಲ, ವ್ಯಾಸರಾಯ ಬಲ್ಲಾಳ, ರಾಮಚಂದ್ರ ಶರ್ಮ, ಪ್ರಭುಶಂಕರ, ಕೀರ್ತಿನಾಥ ಕುರ್ತಕೋಟಿ, ಕುಶಾಲಪ್ಪ ಗೌಡ, ಟಿ.ವಿ. ವೆಂಕಟಾಚಲಶಾಸ್ತ್ರಿ, ಎಂ. ಚಿದಾನಂದ ಮೂರ್ತಿ, ಎಂ. ಎಂ. ಕಲಬುರ್ಗಿ, ವಾಣಿ, ಅನುಪಮ ನಿರಂಜನ, ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ, ಎಚ್. ಎಂ. ಚನ್ನಯ್ಯ, ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ, ಆಲನಹಳ್ಳಿ ಕೃಷ್ಣ, ಡಿ. ಆರ್. ನಾಗರಾಜ, ಗಂಗಾಧರ ಚಿತ್ತಾಲ, ಕೆ. ಮರುಳ ಸಿದ್ದಪ್ಪ, ಗಿರಡ್ಡಿ ಗೋವಿಂದ ರಾಜ, ಸೋಮಶೇಖರ ಇಮ್ರಾಪುರ, ಚಂದ್ರಕಾಂತ ಕುಸನೂರ, ಜಿ. ಎಸ್. ಸಿದ್ದಲಿಂಗಯ್ಯ, ಸಿದ್ದಲಿಂಗಯ್ಯ, ದೇವನೂರು ಮಹಾದೇವ, ಸಿದ್ದಲಿಂಗ ಪಟ್ಟಣ ಶೆಟ್ಟಿ, ವೀಣಾ ಶಾಂತೇಶ್ವರ, ಸಿ. ಪಿ. ಕೃಷ್ಣ ಕುಮಾರ, ಎಚ್.ಜೆ. ಲಕ್ಕಪ್ಪ ಗೌಡ, ಬೆಸಗರಹಳ್ಳಿ ರಾಮಣ್ಣ, ಗೀತಾನಾಗಭೂಷಣ, ಜಿ.ಎಚ್. ನಾಯಕ, ಸಾರಾ ಅಬೂಬಕರ್, ವೈದೇಹಿ, ಶೈಲಜ ಉಡಚಣ, ಬಿ. ಟಿ. ಲಲಿತಾನಾಯಕ್, ಕುಂ. ವೀರಭದ್ರಪ್ಪ, ಕುಸುಮಾಕರ ದೇವರಗಣ್ಣೂರ, ಎಚ್. ಎಸ್. ಶಿವಪ್ರಕಾಶ, ಬಿ. ಎ. ವಿವೇಕ ರೈ, ಬಿ. ಎ. ಸನದಿ, ಕೆ. ಎಸ್. ನಿಸಾರ್ ಅಹ್ಮದ್, ಬರಗೂರು ರಾಮಚಂದ್ರಪ್ಪ, ಮ ನ ಜವರಯ್ಯ, ವಿಜಯಾ ದಬ್ಬೆ.

**ತೌಲನಿಕ ಕಾವ್ಯ ಮಿಮಾಂಸೆ ಮತ್ತು ಸಾಹಿತ್ಯ ವಿಮರ್ಶೆ**

ಪರಿಕಲ್ಪನೆಗಳು : ಅಲಂಕಾರ, ರೀತಿ, ಗುಣ, ರಸ, ಧ್ವನಿ, ವಕ್ರೋಕ್ತಿ, ಔಚಿತ್ಯ.

ಕಾವ್ಯ ಲಕ್ಷಣಗಳು : ಭಾಮಹ, ದಂಡಿ, ವಾಮನ, ರುದ್ರಟ, ಆನಂದವರ್ಧನ, ಧನಂಜಯ, ಮಮ್ಮಟ, ಜಗನ್ನಾಥ ಪಂಡಿತ, ಅಪ್ಪಯ್ಯ ದೀಕ್ಷಿತ, ವಿಶ್ವನಾಥ - ಇವರು ಪ್ರತಿಪಾದಿಸಿದ ಕಾವ್ಯ ಲಕ್ಷಣಗಳು.

ಅರ್ಥಾಲಂಕಾರ, ಶಬ್ದಾಲಂಕಾರ, ಉಪಮಾ, ರೂಪಕ, ಉತ್ಪ್ರೇಕ್ಷೆ, ದೀಪಕ, ದೃಷ್ಟಾಂತ, ಶ್ಲೇಷೆ, ಯಮಕ, ಅನುಪ್ರಾಸ.

ರೀತಿ, ಮಾರ್ಗ - ಶೈಲಿ : ಇವುಗಳನ್ನು ಕುರಿತ ಲಾಕ್ಷಣಿಕರ ಸೂತ್ರಗಳು ಮತ್ತು ವಿವರಣೆಗಳು.

ರಸ ಸಿದ್ಧಾಂತ : ರಸಸೂತ್ರದ ವ್ಯಾಖ್ಯಾನಗಳು, ಸಾಧಾರಣೀಕರಣ, ಸಪ್ತವಿಘ್ನಗಳು, ನವರಸಗಳು.

ಧ್ವನಿ ಸಿದ್ಧಾಂತ : ಸ್ಫೋಟವಾದ, ಅಭಿದಾ, ಲಕ್ಷಣ, ವ್ಯಂಜನಾವೃತ್ತಿಗಳು ; ವಾಚ್ಯಾರ್ಥ, ಲಕ್ಷ್ಯಾರ್ಥ, ವ್ಯಂಗ್ಯಾರ್ಥ, ಅಲಂಕಾರ ಧ್ವನಿ, ವಸ್ತುಧ್ವನಿ, ರಸಧ್ವನಿ, ಗುಣೀಭೂತ ವ್ಯಂಗ್ಯ.

ಪ್ರಮುಖ ಆಲಂಕಾರಿಕರು ಮತ್ತು ಅವರ ಕೃತಿಗಳು : ಭರತ, ಭಾಮಹ, ದಂಡಿ, ವಾಮನ, ರಾಜಶೇಖರ, ಕುಂತಕ, ಮಮ್ಮಟ, ವಿಶ್ವನಾಥ, ಆನಂದವರ್ಧನ, ಅಭಿನವಗುಪ್ತ, ಕ್ಷೇಮೇಂದ್ರ, ಶ್ರೀವಿಜಯ, ನಾಗವರ್ಮ II, ಕವಿಕಾಮ, ಸಾಳ್ವ, ತಿರುಮಲಾರ್ಯ, ಉದಯಾದಿತ್ಯ.

ಪಾಶ್ಚಾತ್ಯ ಕಾವ್ಯಮೀಮಾಂಸೆಯ ಕೆಲವು ಪರಿಕಲ್ಪನೆಗಳು : ಅನುಕರಣ, ಕೆಥಾರ್ಸಿಸ್, ಭವ್ಯತೆ (subline), Imagination, Fancy, Intution, Psychical distance, ಕಾವ್ಯ ಪ್ರತಿಮೆ (Poetic Image), ವಸ್ತು ಪ್ರತಿರೂಪ (Objective correlative), ಪರಂಪರೆ ಮತ್ತು ವ್ಯಕ್ತಿ ಪ್ರತಿಭೆ (Tradition and Individual Talent), ಅಭಿವ್ಯಕ್ತಿ (Expression), ವ್ಯಕ್ತಿತ್ವ ನಿರಸನ (Depersonalisation), ಸಂವಹನ, ಶೈಲಿ.

ಪ್ರಮುಖ ಮೀಮಾಂಸಕರ / ವಿಮರ್ಶಕರ ತತ್ವಗಳು : ಪ್ಲೇಟೋ, ಅರಿಸ್ಟಾಟಲ್, ಹೊರೇಸ್, ಲಾಂಜಿನಸ್, ಕ್ರೋಚೆ, ಸ್ಯಾಮುವೆಲ್ ಜಾನ್ಸನ್, ವರ್ಡ್ಸ್‌ವರ್ತ್, ಕೊಲರಿಜ್, ಶೆಲ್ಲಿ, ಮ್ಯಾಥ್ಯೂ ಆರ್ನಾಲ್ಡ್, ಎಜ್ರಾಪೌಂಡ್, ಟಿ. ಎಸ್. ಎಲಿಯೆಟ್, ಐ.ಎ. ರಿಚರ್ಡ್ಸ್, ಎಫ್. ಆರ್. ಲೀವೀಸ್, ಜಾರ್ಜ್ ಲ್ಯೂಕಾಸ್, ಲೂಸಿಯನ್ ಗೋಲ್ಡ್‌ಮನ್, ರೇಮಂಡ್ ವಿಲಿಯಮ್ಸ್, ಬ್ರೆಕ್ಟ್, ಲೂಯಿ ಆಲ್ತೂಸೆ, ಸಿಮೋನ್ ದಿ ಬೊವಾ, ಕೇಟ್ ಮಿಲ್ಲೆಟ್, ಅಲೈನ್ ಶೊವಾಲ್ಟರ್, ಎಡ್ವರ್ಡ್ ಸಯಿದ್.

ಸಾಹಿತ್ಯ ವಿಮರ್ಶೆಯ ಪ್ರಮುಖ ವಿಧಾನಗಳು / ಪಂಥಗಳು : ರೊಮ್ಯಾಂಟಿಕ್, ರೂಪನಿಷ್ಠ, ಪ್ರಾಯೋಗಿಕ, ರಾಚನಿಕ, ಮನೋವಿಶ್ಲೇಷಣಾತ್ಮಕ, ಚಾರಿತ್ರಿಕ, ಮಾರ್ಕ್ಸ್‌ವಾದಿ, ಸ್ತ್ರೀವಾದಿ, ವಸಾಹತೋತ್ತರ.

**ಕನ್ನಡ ಭಾಷೆಯ ಚರಿತ್ರೆ :**

ಕನ್ನಡ ಭಾಷೆಯ ಪ್ರಾಚೀನತೆ : ಕನ್ನಡ ನಾಡು-ನುಡಿಗಳು, ಗ್ರೀಕ್ ಪ್ರಹಸನ, ಶಾಸನಗಳಲ್ಲಿ ಉಲ್ಲೇಖ.

ಕನ್ನಡ ಭಾಷೆಯ ವಿವಿಧ ಹಂತಗಳು : ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ.

ಕನ್ನಡದ ಪ್ರಾದೇಶಿಕ ಪ್ರಭೇದಗಳು : ಹಳೆಯ ಮೈಸೂರು ಕನ್ನಡ, ಕರಾವಳಿ ಕನ್ನಡ, ಧಾರವಾಡ ಕನ್ನಡ, ಗುಲಬರ್ಗ ಕನ್ನಡ.

ಕನ್ನಡ ವರ್ಣಮಾಲೆ : ಧ್ವನಿಮಾ ಮತ್ತು ಆಕೃತಿಮಾಗಳು.

ನಾಮಪದ : ಲಿಂಗ - ಮಹತ್ ಮತ್ತು ಅಮಹತ್; ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ.

ವಿಭಕ್ತಿ : ಏಳು ವಿಭಕ್ತಿಗಳ ಸ್ವರೂಪ ಮತ್ತು ಪ್ರತ್ಯಯಗಳು, ವಿಭಕ್ತಿ ಪಲ್ಲಟ.

ಸರ್ವನಾಮಗಳು : ಬಗೆಗಳು, ನಿದರ್ಶನಗಳು.

ಅಭಿವ್ಯಾಪಕ - ವ್ಯಾವರ್ತಕ (ಸಮ್ಮುಖ - ಅಸಮ್ಮುಖ), ಆತ್ಮಾರ್ಥಕ.

ಕ್ರಿಯಾಪದ : ಕಾಲತ್ರಯ, ನಿಷೇಧಾರ್ಥಕ, ವಿಧ್ಯರ್ಥಕ, ಪ್ರೇರಣಾರ್ಥಕ, ಸಂಭಾವನಾರ್ಥಕ, ಕರ್ಮಣಿ ಪ್ರಯೋಗ.

ಸಮಾಸ : ಕರ್ಮಧಾರಯ, ದ್ವಂದ್ವ, ಬಹುವ್ರೀಹಿ, ದ್ವಿಗು, ಅರಿ ಸಮಾಸ, ಕ್ರಿಯಾ ಸಮಾಸ, ಗಮಕ ಸಮಾಸ, ತತ್ಪುರುಷ ಸಮಾಸ.

ದೇಶ್ಯ - ಅನ್ಯ ದೇಶ್ಯ: ಕನ್ನಡ ಭಾಷೆಯಲ್ಲಿ ಕಂಡುಬರುವ ಅನ್ಯ ದೇಶ್ಯಗಳು : ಸಂಸ್ಕೃತ, ಪ್ರಾಕೃತ, ಮರಾಠಿ, ಹಿಂದಿ, ಉರ್ದು, ಪೋರ್ಚುಗೀಸ್, ಅರೆಬಿಕ್, ಇಂಗ್ಲಿಷ್ ನಿದರ್ಶನಗಳು.

ಕನ್ನಡ ಭಾಷೆಯ ಬೆಳವಣಿಗೆ : ಭಾಷಾ ಸ್ವೀಕರಣ, ಆಧುನೀಕರಣ, ಅರ್ಥವ್ಯತ್ಯಾಸ, ಅನುವಾದ, ರೂಪಾಂತರ.

## ಪತ್ರಿಕೆ III (Paper III)

### 'A' ಭಾಗ (Part 'A')

**Unit—I**

ಪ್ರಾಚೀನ ಕವಿಗಳು - ಕೃತಿಗಳು :

ಕವಿರಾಜ ಮಾರ್ಗ, ವಡ್ಡಾರಾಧನೆ, ಪಂಪ, ರನ್ನ, ಜನ್ನ, ನಾಗವರ್ಮ I, ನಾಗಚಂದ್ರ, ನಯಸೇನ.

**Unit—II**

ನಡುಗನ್ನಡ ಕವಿಗಳು - ಕೃತಿಗಳು : ಜೇಡರ ದಾಸಿಮಯ್ಯ, ಬಸವಣ್ಣ, ಅಲ್ಲಮ, ಅಕ್ಕ ಮಹಾದೇವಿ, ಸಿದ್ಧರಾಮ, ಶೂನ್ಯ ಸಂಪಾದನೆ, ಹರಿಹರ, ರಾಘವಾಂಕ, ಚಾಮರಸ, ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರವರ್ಣಿ, ಶ್ರೀಪಾದರಾಯ, ಪುರಂದರದಾಸ, ಕನಕದಾಸ, ಸರ್ವಜ್ಞ, ಸಂಚಿಯ ಹೊನ್ನಮ್ಮ, ಬಸವಪ್ಪ ಶಾಸ್ತ್ರಿ, ಮುದ್ದಣ.

**Unit—III**

ಹೊಸಗನ್ನಡ ಕವಿಗಳು - ಕೃತಿಗಳು : ಬಿ.ಎಂ.ಶ್ರೀ, ಗೋವಿಂದ ಪೈ, ಡಿವಿಜಿ, ಮಧುರಚೆನ್ನ, ಕುವೆಂಪು, ಬೇಂದ್ರೆ, ಗೋಕಾಕ, ಪುತಿನ, ರಾಜರತ್ನಂ, ಕೆ. ಎಸ್. ನರಸಿಂಹಸ್ವಾಮಿ, ಜಿ. ಎಸ್. ಶಿವರುದ್ರಪ್ಪ, ಚೆನ್ನವೀರ ಕಣವಿ, ಗೋಪಾಲಕೃಷ್ಣ ಅಡಿಗ, ರಾಮಚಂದ್ರ ಶರ್ಮ, ಕೆ. ಎಸ್. ನಿಸಾರ ಅಹಮದ್, ಸಿದ್ದಲಿಂಗಯ್ಯ.

Unit—IV

**ಆಧುನಿಕ ಕಾದಂಬರಿ - ಕಥೆ :** ಪಂಜೆ ಮಂಗೇಶರಾಯ, ಕೆರೂರು ವಾಸುದೇವಾಚಾರ್ಯ, ಗುಲ್ವಾಡಿ ವೆಂಕಟರಾವ್, ಎಂ. ಎಸ್. ಪುಟ್ಟಣ್ಣ, ಬಿ. ವೆಂಕಟಾಚಾರ್ಯ, ಗಳಗನಾಥ, ಶಿವರಾಮ ಕಾರಂತ, ಕೆ. ವಿ. ಪುಟ್ಟಪ್ಪ, ದೇವುಡು, ರಾವ ಬಹಾದ್ದೂರ, ಮಾಸ್ತಿ, ಕೆ. ವಿ. ಅಯ್ಯರ್, ಮಿರ್ಜಿ ಅಣ್ಣಾರಾಯ, ಅನಕೃ, ತರಾಸು, ಬಸವರಾಜ ಕಟ್ಟೀಮನಿ, ಚದುರಂಗ, ತಿರುಮಲಾಂಬ, ತ್ರಿವೇಣಿ, ಕೊಡಗಿನ ಗೌರಮ್ಮ, ಅಶ್ವತ್ಥ, ನಿರಂಜನ, ಯು. ಆರ್. ಅನಂತಮೂರ್ತಿ, ಲಂಕೇಶ, ಪೂರ್ಣಚಂದ್ರ ತೇಜಸ್ವಿ, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಎಸ್. ಎಲ್. ಭೈರಪ್ಪ, ವ್ಯಾಸರಾಯ ಬಲ್ಲಾಳ, ಚಂದ್ರಶೇಖರ ಕಂಬಾರ, ಅನುಪಮಾ ನಿರಂಜನ, ಆಲನಹಳ್ಳಿ ಕೃಷ್ಣ, ಕುಂ. ವೀರಭದ್ರಪ್ಪ, ದೇವನೂರ ಮಹಾದೇವ.

Unit—V

**ಹೊಸಗನ್ನಡ ನಾಟಕ :** ಬಸವಪ್ಪ ಶಾಸ್ತ್ರಿ, ಶ್ರೀಕಂಠೇಗೌಡ, ಸಂಸ, ಕೈಲಾಸಂ, ಶ್ರೀರಂಗ, ಪರ್ವತವಾಣಿ, ಗಿರೀಶ ಕಾರ್ನಾಡ, ಚಂದ್ರಶೇಖರ ಕಂಬಾರ, ಲಂಕೇಶ, ಚಂಪಾ, ಚಂದ್ರಕಾಂತ ಕುಸನೂರ, ಎಚ್. ಎಸ್. ಶಿವಪ್ರಕಾಶ.

Unit—VI

**ಸಂಶೋಧನೆ - ವಿಮರ್ಶೆ :**

ಶಂಬಾ ಜೋಶಿ, ಗೋವಿಂದ ಪೈ, ಮುಳಿಯ ತಿಮ್ಮಪ್ಪಯ್ಯ, ಮ. ಪ್ರ. ಪೂಜಾರ, ಕೆ. ಜಿ. ಕುಂದಣಗಾರ, ಆರ್. ನರಸಿಂಹಾಚಾರ್, ಎಸ್. ಜಿ. ನರಸಿಂಹಾಚಾರ್, ಡಿ. ಕೆ. ಭೀಮಸೇನರಾವ್, ಆರ್. ಸಿ. ಹಿರೇಮಠ, ಡಿ ಎಲ್. ನರಸಿಂಹಾಚಾರ್, ತೀನಂ ಶ್ರೀಕಂಠಯ್ಯ, ಸೇಡಿಯಾಪು ಕೃಷ್ಣ ಭಟ್ಟ, ರಂ. ಶ್ರೀ ಮುಗಳಿ, ಎಂ. ಮರಿಯಪ್ಪ ಭಟ್ಟ, ದೇ. ಜವರೇಗೌಡ, ಕ. ವೆಂ. ರಾಘವಾಚಾರ್, ಸ. ಸ. ಮಾಳವಾಡ, ಎಸ್. ಎಸ್. ಭೂಸನೂರಮಠ, ಎಸ್. ಜಿ. ನಂದಿಮಠ, ಶಿ. ಶಿ. ಬಸವನಾಳ, ಎಚ್. ದೇವಿರಪ್ಪ, ಎಚ್. ತಿಪ್ಪೇರುದ್ರಸ್ವಾಮಿ, ಹಾ. ಮಾ. ನಾಯಕ, ಚಿದಾನಂದ ಮೂರ್ತಿ, ಎಲ್. ಬಸವರಾಜು, ಜೀ. ಶಂ. ಪರಮಶಿವಯ್ಯ, ಟಿ. ವಿ. ವೆಂಕಟಾಚಲಶಾಸ್ತ್ರಿ, ಹಂಪ ನಾಗರಾಜಯ್ಯ, ಎಂ. ಎಸ್. ಸುಂಕಾಪುರ, ಎಂ. ಎಂ. ಕಲಬುರ್ಗಿ, ಎಲ್. ಆರ್. ಹೆಗಡೆ, ಎ. ಕೆ. ರಾಮಾನುಜನ್, ಕುಶಾಲಪ್ಪ ಗೌಡ, ಕೀರ್ತಿನಾಥ ಕುರ್ತಕೋಟಿ, ಜಿ. ಎಚ್. ನಾಯಕ, ಗಿರಡ್ಡಿ ಗೋವಿಂದರಾಜ, ವಿ. ಎಂ. ಇನಾಮದಾರ, ಎಲ್. ಎಸ್. ಶೇಷಗಿರಿ ರಾವ್, ಜಿ. ಎಸ್. ಆಮೂರ, ಜಿ. ಎಸ್. ಶಿವರುದ್ರಪ್ಪ, ಪ್ರಭುಶಂಕರ, ಎಚ್. ಎಂ. ಚೆನ್ನಯ್ಯ, ಡಿ. ಆರ್. ನಾಗರಾಜ, ವಿಜಯಾ ದಬ್ಬೆ, ಸಿ.ಎನ್. ರಾಮಚಂದ್ರನ್.

Unit—VII

**ತೌಲನಿಕ ಕಾವ್ಯ ಮಿಮಾಂಸೆ :**

ಪ್ರಮುಖ ಮೀಮಾಂಸಕರು : ಪ್ಲೇಟೊ, ಅರಿಸ್ಟಾಟಲ್, ಹೊರೇಸ್, ಲಾಂಜಿನಸ್, ವರ್ಡ್ಸ್‌ವರ್ತ್, ಕೊಲರಿಜ್, ಭರತ, ಭಾಮಹ, ದಂಡಿ, ವಾಮನ, ರಾಜಶೇಖರ, ಕುಂತಕ, ಮಮ್ಮಟ, ವಿಶ್ವನಾಥ, ಆನಂದವರ್ಧನ, ಅಭಿನವಗುಪ್ತ, ಕ್ಷೇಮೇಂದ್ರ, ಶ್ರೀ ವಿಜಯ, ನಾಗವರ್ಮ II, ಸಾಳ್ವ, ತಿರುಮಲಾರ್ಯ, ವಿಜಯಾದಿತ್ಯ.

ಪ್ರಮುಖ ಮೀಮಾಂಸೆಯ ತತ್ವಗಳು: ಅನುಕರಣ, ಕೆಥಾರ್ಸಿಸ್, ಭವ್ಯತೆ, ಇಮ್ಯಾಜಿನೇಶನ್, ಮಾನಸಿಕ ದೂರ, ಕಾವ್ಯ ಪ್ರತಿಮೆ, ಶೈಲಿ, ಸಂವಹನ, ಅಲಂಕಾರ, ರೀತಿ, ರಸ, ಧ್ವನಿ, ಔಚಿತ್ಯ, ವಕ್ರೋಕ್ತಿ, ಮಾರ್ಗ - ದೇಶಿ, ವಸ್ತುಕ - ವರ್ಣಕ.

Unit—VIII

**ಸಾಹಿತ್ಯ ವಿಮರ್ಶೆಯ ತತ್ವಗಳು :**

ಸಾಹಿತ್ಯ ವಿಮರ್ಶೆಯ ತತ್ವಗಳು - ಪಂಥಗಳು : ರೊಮ್ಯಾಂಟಿಕ್, ರೂಪನಿಷ್ಠ, ಪ್ರಾಯೋಗಿಕ, ಚಾರಿತ್ರಿಕ, ಮಾರ್ಕ್ಸ್‌ವಾದಿ, ರಾಚನಿಕ, ರಾಚನಿಕೋತ್ತರ, ಮನೋವಿಶ್ಲೇಷಣಾತ್ಮಕ, ಸ್ತ್ರೀವಾದಿ, ವಸಾಹತೋತ್ತರ.

ಪ್ರಮುಖ ವಿಮರ್ಶಕರು - ಚಿಂತಕರು : ಎಜ್ರಾ ಪೌಂಡ್, ಟಿ ಎಸ್. ಎಲಿಯಟ್, ಐ. ಎ. ರಿಚರ್ಡ್ಸ್, ಎಫ್. ಆರ್. ಲೀವಿಸ್, ಸ್ಯಾಮುವಲ್ ಜಾನ್‌ಸನ್, ಜಾರ್ಜ ಲ್ಯುಕಾಸ್, ಲುಸಿಯನ್ ಗೋಲ್ಡ್‌ಮನ್, ರೇಮಂಡ್ ವಿಲ್ಲಿಯಮ್ಸ್, ವಾಲ್ಟರ್ ಬೆಂಜಮಿನ್, ಬ್ರೆಕ್ಟ್, ಲೂಯಿ ಆಲ್ತೂಸೆ, ಸಿಗ್ಮಂಡ್ ಫ್ರಾಯ್ಡ್, ರೋಲಾ ಬಾರ್ಥ್, ಸಿಮೋನ್ ದಿ ಬೋವಾ, ಕೇಟ್ ಮಿಲ್ಲೆಟ್, ಅಲೈನ್ ಶವಾಲ್ಟರ್, ಎಡ್ವರ್ಡ್ ಸಯಿದ್.

## Unit—IX

ಕನ್ನಡ ಭಾಷೆಯ ಚರಿತ್ರೆ : ಕನ್ನಡ ಭಾಷೆಯ ಪ್ರಾಚೀನ ಉಲ್ಲೇಖಗಳು, ದಕ್ಷಿಣೋತ್ತರ ಮಾರ್ಗಗಳು, ಕನ್ನಡದ ಪ್ರಾದೇಶಿಕ ಉಪಭಾಷೆಗಳು.

ಲಿಂಗ - ಮಹತ್, ಅಮಹತ್; ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ.

ವಿಭಕ್ತಿ - ಸ್ವರೂಪ, ಪ್ರತ್ಯಯಗಳು.

ಸರ್ವನಾಮ - ಬಗೆಗಳು ; ಅಭಿವ್ಯಾಪಕ - ವ್ಯಾವರ್ತಕ ಸರ್ವನಾಮಗಳು, ಆತ್ಮಾರ್ಥಕ ಸರ್ವನಾಮಗಳು.

ಕ್ರಿಯಾಪದ - ಕಾಲತ್ರಯ, ನಿಷೇಧಾರ್ಥಕ, ವಿಧ್ಯರ್ಥಕ, ಸಂಭಾವನಾರ್ಥಕ, ಪ್ರೇರಣಾರ್ಥಕ.

ಕನ್ನಡ ವರ್ಣಮಾಲೆ : ಧ್ವನಿಮಾಗಳು, ಆಕೃತಿಮಾಗಳು.

ಸಮಾಸ: ಕರ್ಮಧಾರಯ, ದ್ವಂದ್ವ, ಬಹುವ್ರೀಹಿ, ತತ್ಪುರುಷ, ಕ್ರಿಯಾಸಮಾಸ, ಗಮಕ ಸಮಾಸ.

ಕನ್ನಡ ಭಾಷೆಯ ಬೆಳವಣಿಗೆ - ಭಾಷಾ ಸ್ವೀಕರಣ, ಅನ್ಯದೇಶೀಯ, ಅರ್ಥ ವ್ಯತ್ಯಾಸ, ಅರ್ಥಾಂತರ, ಆಧುನೀಕರಣ ಮತ್ತು ರೂಪಾಂತರ - ನಿದರ್ಶನಗಳು.

## Unit—X

ಕನ್ನಡ ಛಂದಸ್ಸು

ಗಣಗಳ ಸ್ವರೂಪ : ವರ್ಣಗಣ, ಮಾತ್ರಾಗಣ, ಅಂಶ ಗಣಗಳ ಲಕ್ಷಣಗಳು, ನಿದರ್ಶನಗಳು.

ಲಯ, ಯತಿ, ಪ್ರಾಸ, ವಡಿ.

ಖ್ಯಾತ ಕರ್ನಾಟಕ ವೃತ್ತಗಳು

ಕರ್ನಾಟಕ ವಿಷಯ ಜಾತಿ - ಛಂದಸ್ಸು :

ಛಂದೋರೂಪಗಳು - ಬಗೆಗಳು ಮತ್ತು ನಿದರ್ಶನಗಳು.

ತ್ರಿಪದಿ ಮತ್ತು ಷಟ್ಪದಿಗಳ ಉಗಮ - ವಿಕಾಸ.

ಹೊಸಗನ್ನಡ ಛಂದಸ್ಸಿನ ಲಯಗಳು : ಮಾತ್ರೆ, ಮುಡಿ, ಪದ್ಮಗಣ, ಅನಾಗತ, ಗಣಪರಿವೃತ್ತಿ, ಸರಳರಗಳೆ, ಮಹಾಛಂದಸ್ಸು.

ಸಾನೆಟ್, ಪ್ರಗಾಥ, ಮುಕ್ತ ಛಂದಸ್ಸಿನ ಸ್ವರೂಪ ಮತ್ತು ವೈವಿಧ್ಯ.

## ಭಾಗ - B (Part - B)

### ಜಾನಪದ ಅಧ್ಯಯನ

**Elective—I**

ಜಾನಪದದ ಸ್ವರೂಪ, ವ್ಯಾಪ್ತಿ ಮತ್ತು ಪ್ರಮುಖ ಪ್ರಕಾರಗಳು.

ಜಾನಪದ ವರ್ಗೀಕರಣ.

ಜಾನಪದವನ್ನು ಕುರಿತ ವಿವಿಧ ಸಿದ್ಧಾಂತಗಳು : ಪುರಾಣಮೂಲ ಸಿದ್ಧಾಂತ, ಭಾರತ ಮೂಲ ಸಿದ್ಧಾಂತ, ಮಾನವ ಶಾಸ್ತ್ರೀಯ ಸಿದ್ಧಾಂತ, ಮನೋವಿಶ್ಲೇಷಣಾತ್ಮಕ ಸಿದ್ಧಾಂತ, ಪ್ರಕೃತಿ ಮೂಲ ಸಿದ್ಧಾಂತ, ಕುಲದೇವತಾ ಮೂಲ ಸಿದ್ಧಾಂತ, ಚಾರಿತ್ರಿಕ, ಭೌಗೋಳಿಕ ವಿಧಾನ, ರಾಚನಿಕ ವಿಧಾನ, ಸಂದರ್ಭ ಸಿದ್ಧಾಂತ, ಪ್ರದರ್ಶನ ಸಿದ್ಧಾಂತ.

ಕರ್ನಾಟಕದ ಜನಪದ ರಂಗಭೂಮಿ : ಮೂಡಲಪಾಯ, ಬಯಲಾಟ, ದೊಡ್ಡಾಟ, ಯಕ್ಷಗಾನ ಬಯಲಾಟ, ಸಣ್ಣಾಟ, ದಾಸರಾಟ, ಕೃಷ್ಣ ಪಾರಿಜಾತ, ಸೂತ್ರದ ಗೊಂಬೆಯಾಟ, ತೊಗಲು ಗೊಂಬೆಯಾಟ, ಪಗರಣ.

ಕರ್ನಾಟಕದ ವೃತ್ತಿಗಾಯಕ ಪರಂಪರೆ : ಕಂಸಾಳೆಯವರು, ನೀಲಗಾರರು, ಚೌಡಿಕೆಯವರು, ಗೊರವರು, ಕರಪಾಲದವರು, ದೊಂಬಿದಾಸರು, ದಾಸರು, ತಂಬೂರಿಯವರು, ಗೊಂದಲಿಗರು, ಕಿನ್ನರಿ ಜೋಗಿಗಳು, ಹೆಳವರು, ವಾಘೆ ಮುರುಳಿ, ಸಾರುವ ಅಯ್ಯನವರು, ತೆಲುಗು ಜಂಗಮರು, ಸಿದ್ದಿಕಿ ಸಿದ್ದಿ.

ಜಾನಪದ ಕ್ಷೇತ್ರಕಾರ್ಯ : ಕ್ಷೇತ್ರಕಾರ್ಯದ ಪ್ರಕಾರಗಳು - ವಿಧಾನಗಳು ; ಕ್ಷೇತ್ರಕಾರ್ಯಕರ್ತನ ಅರ್ಹತೆಗಳು; ಕ್ಷೇತ್ರ ಕಾರ್ಯದ ಆಧುನಿಕ ವಿಧಾನಗಳು, ಸಲಕರಣೆ - ಸಾಧನಗಳು; ಪ್ರಶ್ನಾವಳಿಯ ಸ್ವರೂಪ; ಜಾನಪದ ದಾಖಲೀಕರಣ.

ಕರ್ನಾಟಕದಲ್ಲಿ ಜಾನಪದ ಅಧ್ಯಯನ ಮತ್ತು ಪ್ರವೃತ್ತಿಗಳು :

ಸ್ವಾತಂತ್ರ್ಯ ಪೂರ್ವ

ಸ್ವಾತಂತ್ರ್ಯೋತ್ತರ

ಇತ್ತೀಚಿನ ಅಧ್ಯಯನಗಳು ಮತ್ತು ಪ್ರವೃತ್ತಿಗಳು

### ತೌಲನಿಕ ಸಾಹಿತ್ಯ ಅಧ್ಯಯನ

**Elective—II**

ತೌಲನಿಕ ಸಾಹಿತ್ಯದ ವ್ಯಾಖ್ಯೆ ಮತ್ತು ಸ್ವರೂಪ.

ತೌಲನಿಕ ಅಧ್ಯಯನದ ಪ್ರಮುಖ ಮಾರ್ಗಗಳು

ರಾಷ್ಟ್ರೀಯತೆಯ ಸ್ವರೂಪ ಮತ್ತು ರಾಷ್ಟ್ರೀಯ ಸಾಹಿತ್ಯಗಳ ಪರಿಕಲ್ಪನೆ.

ಪ್ರಾದೇಶಿಕತೆಯ ಸ್ವರೂಪ ಮತ್ತು ಪ್ರಾದೇಶಿಕ ಸಾಹಿತ್ಯದ ಪರಿಕಲ್ಪನೆ.

ತೌಲನಿಕ ಅಧ್ಯಯನದ ಪ್ರಧಾನ ಕ್ಷೇತ್ರಗಳು

(i) ಸಾದೃಶ್ಯ ಮತ್ತು ಪರಂಪರೆ - ಸಂಸ್ಕೃತ

(ii) ಪ್ರಭಾವದ ಪರಿಕಲ್ಪನೆ - ಪಾಶ್ಚಾತ್ಯ ಸಾಹಿತ್ಯ

(iii) ಸಮಾನ ಸಾಹಿತ್ಯಕ ಸಂರಚನೆಗಳು - ವಸ್ತು, ಆಶಯ, ಪ್ರಕಾರ.

ಭಾಷಾಂತರದ ಮೂಲ ತತ್ವಗಳು

ಭಾಷಾಂತರದ ಬಗೆಗಳು - ಶಬ್ದಾನುವಾದ, ನಿಕಟಾನುವಾದ, ವಿಸ್ತಾರಾನುವಾದ, ಅರ್ಥಾನುವಾದ, ರೂಪಾಂತರ, ಭಾವಾನುವಾದ, ಸಂಗ್ರಾಹಾನುವಾದ ಮತ್ತು ಅಳವಡಿಕೆ.

**Elective—III** **ಕನ್ನಡ ಛಂದಸ್ಸು**

ವರ್ಣ ವೃತ್ತಗಳ ಸ್ವರೂಪ ಮತ್ತು ಬಗೆಗಳು : ಸಂಸ್ಕೃತದ ಹಿನ್ನೆಲೆ.

ಖ್ಯಾತ ಕರ್ನಾಟಕ ವೃತ್ತಗಳು - ಸ್ವರೂಪ - ಲಕ್ಷಣ ಮತ್ತು ನಿದರ್ಶನಗಳು.

ಮಾತ್ರಾ ಛಂದಸ್ಸು - ಪ್ರಾಕೃತದ ಹಿನ್ನೆಲೆ - ಕನ್ನಡದಲ್ಲಿ ಬಳಕೆಯಾದ ಪ್ರಮುಖ ಮಾತ್ರಾಬಂಧಗಳು - ಕಂದ, ರಗಳೆ.

ರಗಳೆಯ ಉಗಮ, ಲಕ್ಷಣ ಮತ್ತು ಇತಿಹಾಸ.

ಅಂಶ ಛಂದಸ್ಸು : ದೇಸಿ ಹಿನ್ನೆಲೆ : ಕರ್ನಾಟಕ ವಿಷಯ ಜಾತಿ ಛಂದಸ್ಸು : ವಿವಿಧ ಛಂದೋಬಂಧಗಳ ಸ್ವರೂಪ, ಲಕ್ಷಣ ಮತ್ತು ನಿದರ್ಶನಗಳು.

ತ್ರಿಪದಿಯ ಉಗಮ, ಲಕ್ಷಣ ಮತ್ತು ಇತಿಹಾಸ.

ಷಟ್ಪದಿಯ ಉಗಮ, ಲಕ್ಷಣ ಮತ್ತು ಇತಿಹಾಸ.

ಹೊಸಗನ್ನಡ ಛಂದಸ್ಸಿನ ಸ್ವರೂಪ, ಬೆಳವಣಿಗೆ ಮತ್ತು ಮುಖ್ಯ ಲಯಗಳು.

ಹೊಸಗನ್ನಡ ಛಂದೋರೂಪಗಳು - ಸರಳ ರಗಳೆ, ಮಹಾಛಂದಸ್ಸು, ಸಾನೆಟ್, ಪ್ರಗಾಥ, ಮುಕ್ತ ಛಂದಸ್ಸು.

**Elective—IV** **ಶಾಸನ ಶಾಸ್ತ್ರ ಮತ್ತು ಕನ್ನಡ ಶಾಸನ ಸಾಹಿತ್ಯ**

ಶಾಸನಗಳ ಸ್ವರೂಪ ಮತ್ತು ಬಗೆಗಳು : ದಾನ ಶಾಸನ, ವೀರಗಲ್ಲು, ಮಾಸ್ತಿಕಲ್ಲು, ನಿಷಿದಿಗಲ್ಲು, ಯೂಪ ಶಾಸನ.

ಶಾಸನಗಳ ಮಹತ್ವ - ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ, ಭಾಷಿಕ ಮತ್ತು ಸಾಂಸ್ಕೃತಿಕ.

ಕನ್ನಡ ಲಿಪಿಯ ಉಗಮ ಮತ್ತು ವಿಕಾಸದ ವಿವಿಧ ಘಟ್ಟಗಳು.

ಕನ್ನಡದ ಪ್ರಮುಖ ಶಾಸನಗಳು : ಹಲ್ಮಿಡಿ ಶಾಸನ, ಬುಕ್ಕನ ಶ್ರವಣ ಬೆಳಗೊಳದ ಶಾಸನ, ಜಿನವಲ್ಲಭನ ಗಂಗಾಧರಂ ಶಾಸನ, ದೇಕಬ್ಬೆಯ ಬೆಳತೂರಿನ ಶಾಸನ, ಅತ್ತಿಮಬ್ಬೆಯ ಲಕ್ಕುಂಡಿ ಶಾಸನ, ಬೊಪ್ಪಣ್ಣನ ಗೊಮ್ಮಟ ಸ್ತುತಿ, ಕುವರ ಲಕ್ಷ್ಮನ ವೀರಗಲ್ಲು, ಆತಕೂರು ಶಾಸನ, ನಾಗಾಯಿ ಶಾಸನ.

Elective—V

## ತೌಲನಿಕ ದ್ರಾವಿಡ ಭಾಷಾ ವಿಜ್ಞಾನ

ಭಾಷಾ ವಿಜ್ಞಾನದ ಸ್ವರೂಪ ಮತ್ತು ಪ್ರಕಾರಗಳು :

ವರ್ಣನಾತ್ಮಕ, ಚಾರಿತ್ರಿಕ, ತೌಲನಿಕ, ಸಾಮಾಜಿಕ.

ದ್ರಾವಿಡ ಭಾಷಾ ವರ್ಗದ ಸ್ವರೂಪ :

ಮೂಲ ದ್ರಾವಿಡದ ಪರಿಕಲ್ಪನೆ, ದ್ರಾವಿಡ ಭಾಷಾವರ್ಗದ ಭಾಷೆಗಳು.

ದ್ರಾವಿಡ ಭಾಷಾ ವಿಜ್ಞಾನದ ಚರಿತ್ರೆ

ದ್ರಾವಿಡದಲ್ಲಿ ಘೋಷ - ಅಘೋಷ ಧ್ವನಿಮಾಗಳ ವಿನಿಮಯ.

ದ್ರಾವಿಡದಲ್ಲಿ ಇ-ಎ, ಉ-ಒ ವ್ಯತ್ಯಯ.

ದ್ರಾವಿಡದಲ್ಲಿ ನಾಮಪದಗಳು : ಲಿಂಗ, ವಚನ, ವಿಭಕ್ತಿ.

ದ್ರಾವಿಡದಲ್ಲಿ ಸರ್ವನಾಮಗಳು : ಅಭಿವ್ಯಾಪಕ ಮತ್ತು ವ್ಯಾವರ್ತಕ, ಆತ್ಮಾರ್ಥಕ.

ದ್ರಾವಿಡದಲ್ಲಿ ಗುಣವಾಚಕಗಳು :
ಗುಣವಾಚಕಗಳಿಗೂ ನಾಮಪದಗಳಿಗೂ ಇರುವ ಸಂಬಂಧ.
ಕನ್ನಡ ಗುಣವಾಚಕಗಳ ಸ್ವರೂಪ.

ದ್ರಾವಿಡದಲ್ಲಿ ಕ್ರಿಯಾಪದಗಳು :
ಕ್ರಿಯಾಪದಗಳ ರಚನೆ; ಕಾಲ ಪ್ರತ್ಯಯಗಳು.

## SAMPLE QUESTIONS

### Paper II ಪತ್ರಿಕೆ II

**I** ಬಹುಪ್ರಶ್ನೆಗಳು : ಏಕ ಆಯ್ಕೆಯ ಮಾದರಿ

ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳಿರುತ್ತವೆ. ಸರಿಯಾದ ಉತ್ತರದ ಸಂಜ್ಞೆಯನ್ನು ನಿಗದಿತ ಸ್ಥಳದಲ್ಲಿ ಗುರುತಿಸಿರಿ.

*ಉದಾ : ಪಂಪ ಕವಿಯ ಜೀವನ ಚರಿತ್ರೆಗೆ ಸಂಬಂಧಿಸಿದ ಶಾಸನ*

A. ಅಶೋಕನ ಶಾಸನ

B. ಹಲ್ಮಿಡಿ ಶಾಸನ

C. ಜಿನವಲ್ಲಭನ ಗಂಗಾಧರಂ ಶಾಸನ

D. ತಮ್ಮಟಕಲ್ಲಿನ ಶಾಸನ

**II ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ**

ಕೆಳಗಿನ ಲೇಖನ ಭಾಗವನ್ನು ಓದಿ, ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳಗಳಲ್ಲಿ ಗುರುತಿಸಿರಿ.

4 ಅಥವಾ 5 ಪ್ಯಾರಾಗಳ ಸಾಹಿತ್ಯಕ್ಕೆ ಸಂಬಂಧಿಸಿದ ಒಂದು ಲೇಖನ ಭಾಗ ಇರುತ್ತದೆ. ಅದಕ್ಕೆ ಸಂಬಂಧಿಸಿದಂತೆ ಲೇಖಕರ ಗ್ರಹಿಕೆ ಮತ್ತು ಧೋರಣೆಯನ್ನು ಕುರಿತು ಭಿನ್ನ ರೀತಿಯ 7 ಪ್ರಶ್ನೆಗಳು ಇರುತ್ತವೆ. ಇವುಗಳು ಬಹು ಆಯ್ಕೆ - ಒಂದು ಉತ್ತರ ಅಥವಾ ಬಹು ಆಯ್ಕೆ - ಬಹು ಉತ್ತರಗಳ ಮಾದರಿಯವು ಆಗಿರುತ್ತವೆ.

*ಉದಾ :*

1. ಈ ಲೇಖನ ಭಾಗದಲ್ಲಿ ಲೇಖಕರ ಪ್ರಧಾನ ಕಾಳಜಿ.
2. ಈ ಲೇಖನ ಭಾಗದಲ್ಲಿ ಲೇಖಕರ ಆಶಯ.
3. ಇವುಗಳಲ್ಲಿ ಯಾವ ಜೋಡಿಯ ವಿವರಗಳು ಲೇಖಕರ ದೃಷ್ಟಿಯಲ್ಲಿ ಸಮಾನವಾದುವು?
4. ಲೇಖಕರು ನಿರ್ದಿಷ್ಟ ಪರಿಕಲ್ಪನೆಯೊಂದನ್ನು ಪ್ರಧಾನವೆಂದು ಭಾವಿಸಲು ಕಾರಣ.
5. ಈ ಲೇಖನ ಭಾಗದಲ್ಲಿಯ ಲೇಖಕರ ಧಾಟಿ - ಧೋರಣೆಗಳನ್ನು ಹೀಗೆ ವಿವರಿಸಬಹುದು.

**III** ಹೇಳಿಕೆ - ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ

ಈ ಕೆಳಗೆ ಒಂದು ಹೇಳಿಕೆಯಿದ್ದು ಅದಕ್ಕೆ ಒಂದು ವಿವರಣೆಯನ್ನು ಕೊಡಲಾಗಿದೆ. ಇವುಗಳನ್ನು ಆಧರಿಸಿ ಸರಿಯಾದ ಉತ್ತರದ ಸಂಜ್ಞೆಯನ್ನು ನಿಗದಿತ ಸ್ಥಳದಲ್ಲಿ ಗುರುತಿಸಿರಿ.

1. ಹೇಳಿಕೆ : ಅನಾಥ ಪ್ರಜ್ಞೆ, ವ್ಯಕ್ತಿ ವಿಶಿಷ್ಟತೆ, ಪ್ರತಿಮೆಗಳ ಅಭಿವ್ಯಕ್ತಿ ಇವು ನವ್ಯ ಕಾವ್ಯದ ಪ್ರಮುಖ ಲಕ್ಷಣಗಳು.

ವಿವರಣೆ : ಸ್ವಾತಂತ್ರ್ಯದ ಬಯಕೆ, ಧಾರ್ಮಿಕತೆ, ಭಾಷಾಭಿಮಾನದ ಕಾರಣಗಳಿಂದಾಗಿ ನವ್ಯ ಕಾವ್ಯ ರೂಪು ತಾಳಿತು.

A. ಈ ಹೇಳಿಕೆ ಮತ್ತು ವಿವರಣೆ ಎರಡೂ ಸರಿ.

B. ಈ ಹೇಳಿಕೆ ಸರಿ, ವಿವರಣೆ ತಪ್ಪು.

C. ಈ ಹೇಳಿಕೆ ತಪ್ಪು, ವಿವರಣೆ ಸರಿ.

D. ಈ ಹೇಳಿಕೆ ಮತ್ತು ವಿವರಣೆ ಎರಡೂ ತಪ್ಪು.

2. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ?

A. ಪಂಪ - ಅಜಿತ ಪುರಾಣ

B. ಜನ್ನ - ಅನಂತನಾಥ ಪುರಾಣ

C. ನಾಗಚಂದ್ರ - ಕರ್ಣಾಟಕ ಕಾದಂಬರಿ

D. ನೇಮಿಚಂದ್ರ - ರಾಮಚಂದ್ರಚರಿತಪುರಾಣ

## ಪತ್ರಿಕೆ III (Paper III)

## ಭಾಗ 'A' (PART - A)

1. ಪಂಪ ಭಾರತದಲ್ಲಿ ಕರ್ಣನ ಪಾತ್ರ ಚಿತ್ರಣ

   *ಅಥವಾ*

   ರನ್ನನ 'ಗದಾಯುದ್ಧ'ದಲ್ಲಿ ದುರ್ಯೋಧನನ ಪಾತ್ರಚಿತ್ರಣ

2. ಬಸವಣ್ಣನವರ ವಚನಗಳಲ್ಲಿ ಪ್ರಾಣಿ ರೂಪಕಗಳು

   *ಅಥವಾ*

   ಹರಿಶ್ಚಂದ್ರ ಕಾವ್ಯದಲ್ಲಿ ವಿಶ್ವಾಮಿತ್ರನ ಪಾತ್ರಚಿತ್ರಣ

ಭಾಗ 'B' (PART B)

11. ಜಾನಪದ ಅಧ್ಯಯನದಲ್ಲಿ ಚಾರಿತ್ರಿಕ ಭೌಗೋಳಿಕ ಮತ್ತು ಸಂದರ್ಭ ಸಿದ್ಧಾಂತಗಳ ಮಹತ್ವವನ್ನು ವಿವರಿಸಿ.

*ಅಥವಾ*

ರಾಷ್ಟ್ರೀಯತೆಯ ಸ್ವರೂಪ ಮತ್ತು ರಾಷ್ಟ್ರೀಯ ಸಾಹಿತ್ಯದ ಪರಿಕಲ್ಪನೆಯನ್ನು ವಿವರಿಸಿ.

*ಅಥವಾ*

ರಗಳೆಯ ಉಗಮ, ಲಕ್ಷಣ ಮತ್ತು ಇತಿಹಾಸವನ್ನು ನಿರೂಪಿಸಿ.

*ಅಥವಾ*

ಹಲ್ಮಿಡಿ ಶಾಸನ ಮತ್ತು ನಾಗಾಯಿ ಶಾಸನಗಳನ್ನು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಪರಿಶೀಲಿಸಿರಿ.

*ಅಥವಾ*

ಮೂಲ ದ್ರಾವಿಡದ ಪರಿಕಲ್ಪನೆಯನ್ನು ವಿವರಿಸಿ, ದ್ರಾವಿಡ ಭಾಷಾ ವರ್ಗದ ಪ್ರಮುಖ ಭಾಷೆಗಳನ್ನು ಪರಿಚಯಿಸಿರಿ.

★ ★ ★